# ಸಮಾಜ ಕಲ್ಯಾಣ ಇಲಾಖೆ

## SOCIAL WELFARE DEPARTMENT

# ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ಅಧಿನಿಯಮ, 2015 ಮತ್ತು ತಿದ್ದುಪಡಿ ನಿಯಮಗಳು, 2016. (ಅಪರಾಧಗಳು ಮತ್ತು ಪರಿಹಾರ ವಿವರಗಳ ಕೈಪಿಡಿ)

## THE SCHEDULED CASTE AND SCHEDULED TRIBES (PREVENTION OF ATROCITIES) AMENDMENT ACT, 2015 AND AMENDED RULES, 2016. (HAND-BOOK OF LIST OF OFFENCES AND RELIEF PROVIDED)

ಆಯುಕ್ತರ ಕಛೇರಿ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ
ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001

**OFFICE OF THE COMMISSIONER,**
**5TH FLOOR, M.S. BUILDING, DR. B.R. AMBEDKAR VEEDHI**
**BENGALURU -560 001**

# ಮುನ್ನುಡಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಮೇಲೆ ದೌರ್ಜನ್ಯವೆಸಗುವುದನ್ನು ಪ್ರತಿಬಂಧಿಸಲು ಮತ್ತು ಪರಿಹಾರ ಹಾಗೂ ಪುನರ್‌ವಸತಿ ಕಲ್ಪಿಸಲು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮವನ್ನು ಕೇಂದ್ರ ಸರ್ಕಾರವು 1989ರಲ್ಲಿ ಜಾರಿಗೆ ತಂದಿದ್ದು, ಸದರಿ ಕಾಯ್ದೆಗೆ 2015ರಲ್ಲಿ ತಿದ್ದುಪಡಿಯನ್ನು ತರಲಾಗಿದ್ದು, ಅದರಂತೆ ಸೆಕ್ಷನ್‌ಗಳನ್ನು ಮತ್ತು ನಿಯಮ-12(4)ರಲ್ಲಿ ನಿಗದಿಪಡಿಸಿದ ಪರಿಹಾರವನ್ನು ಪರಿಷ್ಕರಿಸಲಾಗಿದೆ. ರಾಜ್ಯ ಸರ್ಕಾರ ಸಹ ಪರಿಷ್ಕೃತ ಪರಿಹಾರವನ್ನು ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ ಸಕಇ 37 ಎಸ್‌ಪಿಎ 2016 ದಿನಾಂಕ 20-06-2016 ರಲ್ಲಿ ಹೊರಡಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ವಿಶೇಷ ರಕ್ಷಣೆಯನ್ನು ಒದಗಿಸುವ ದೃಷ್ಟಿಯಿಂದ ದೌರ್ಜನ್ಯ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ 2015 ಅನ್ನು ಜಾರಿಗೆ ತರಲಾಗಿದ್ದು, ಗೃಹ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಮತ್ತು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಕಾಯ್ದೆಯ ಸಮರ್ಪಕ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

ದೌರ್ಜನ್ಯ ಪ್ರಕರಣಗಳು ಘಟಿಸಿದ ತಕ್ಷಣ ಪೊಲೀಸ್ ಇಲಾಖೆಯು ಎಫ್.ಐ.ಆರ್.ನ್ನು ದೌರ್ಜನ್ಯ ಪ್ರತಿಬಂಧ ಅಧಿನಿಯಮದ ನಿರ್ದಿಷ್ಟ ಸೆಕ್ಷನ್‌ಗಳಡಿ ದಾಖಲಿಸಬೇಕಾಗಿದ್ದು, ಕೆಲವು ಸಂದರ್ಭಗಳಲ್ಲಿ ನಿರ್ದಿಷ್ಟ ಸೆಕ್ಷನ್‌ಗಳನ್ನು ನಮೂದಿಸದೇ ಇರುವುದರಿಂದ ಪರಿಹಾರ ಮಂಜೂರು ಮಾಡುವಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಪ್ರಕರಣಗಳ ವಾದ ಮಂಡಿಸಲು ಸಮಸ್ಯೆಗಳು ಉಂಟಾಗುತ್ತಿದೆ. ಆದ್ದರಿಂದ ಪೊಲೀಸ್ ಇಲಾಖೆಯ ಅಧಿಕಾರಿಗಳು ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿಯಲ್ಲಿ ನಿರ್ದಿಷ್ಟ ಸೆಕ್ಷನ್‌ಗಳಡಿ ಅಪರಾಧ ಸ್ವರೂಪಕ್ಕನುಗುಣವಾಗಿ ಎಫ್.ಐ.ಆರ್. ದಾಖಲಿಸುವ ಬಗ್ಗೆ ಸಂಪೂರ್ಣ ವಿವರವನ್ನು ಈ ಕೈಪಿಡಿಯಲ್ಲಿ ನೀಡಲಾಗಿದೆ.

ದೌರ್ಜನ್ಯದ ಪ್ರಕರಣಗಳ ನಿರ್ವಹಣೆಯಲ್ಲಿ ಜಿಲ್ಲಾಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆಯು ಬಹುಮುಖ್ಯ ಪಾತ್ರ ವಹಿಸಬೇಕಾಗಿರುತ್ತದೆ. ದೌರ್ಜನ್ಯ ಪ್ರಕರಣಗಳು ಘಟಿಸಿದ ತಕ್ಷಣ ನೊಂದ ಸಂತ್ರಸ್ತರ ಸ್ಥಳಕ್ಕೆ ಭೇಟಿ ನೀಡಿ ಪರಿಹಾರ ಮತ್ತು ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಪ್ರತಿ 3 ತಿಂಗಳಿಗೊಮ್ಮೆ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸಭೆ ಕರೆದು ದೌರ್ಜನ್ಯ ಪ್ರಕರಣಗಳ ವಿವಿಧ ಹಂತಗಳ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ. ಜಿಲ್ಲಾಡಳಿತ ಪರಿಹಾರ ಒದಗಿಸುವ ಬಗ್ಗೆ ವಿವರಗಳನ್ನು ಈ ಕೈಪಿಡಿಯಲ್ಲಿ ನೀಡಲಾಗಿದೆ.

ದೌರ್ಜನ್ಯಕ್ಕೊಳಗಾದವರಿಗೆ/ಅವಲಂಬಿತರಿಗೆ ಕಾನೂನು ನೆರವು ನೀಡಿ ಅಭಿಯೋಜನೆಗೆ ಸಂಬಂಧಿಸಿದಂತೆ ಅವರನ್ನು ಸಿದ್ದಗೊಳಿಸಿ ಪ್ರಕರಣದಲ್ಲಿ ನ್ಯಾಯ ಒದಗಿಸುವುದು, ಸರ್ಕಾರಿ ವ್ಯಾಜ್ಯಗಳು ಮತ್ತು ಅಭಿಯೋಗ ಇಲಾಖೆಯ ಕರ್ತವ್ಯವಾಗಿರುತ್ತದೆ. ವಿಶೇಷ ಸಾರ್ವಜನಿಕ ಅಭಿಯೋಜಕರ ನೇಮಕವನ್ನು ಮಾಡಿ ನ್ಯಾಯಾಲಯದಲ್ಲಿರುವ ಪ್ರಕರಣಗಳ ತ್ವರಿತ ವಿಲೇವಾರಿ ಮಾಡಿ ಸಂತ್ರಸ್ತರಿಗೆ ನ್ಯಾಯ ಒದಗಿಸಿಕೊಡುವ ಬಗ್ಗೆ ವಹಿಸಬೇಕಾದ ಕ್ರಮಗಳ ಬಗ್ಗೆ ಈ ಕಾಯಿದೆ ಅಡಿಯಲ್ಲಿ ನೀಡಲಾಗಿದೆ.

ಈ ಕೈಪಿಡಿಯಲ್ಲಿನ ಅಂಶಗಳ ಬಗ್ಗೆ ಸಂಬಂಧಪಟ್ಟ ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಮಾಜ ಕಲ್ಯಾಣ ಇಲಾಖೆ/ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಸೂಕ್ತ ಕ್ರಮ ವಹಿಸಿ ದೌರ್ಜನ್ಯ ಪ್ರತಿಬಂಧ ಅಧಿನಿಯಮ ಮತ್ತು ನಿಯಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕೋರಿದೆ.

**ಆಯುಕ್ತರು,**
**ಸಮಾಜ ಕಲ್ಯಾಣ ಇಲಾಖೆ**

**ಅಪರ ಮುಖ್ಯ ಕಾರ್ಯದರ್ಶಿಗಳು,**
**ಸಮಾಜ ಕಲ್ಯಾಣ ಇಲಾಖೆ**